**ಸಾಕ್ಷಿಯನ್ನು ದಿಃ *03/03/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಎಸಐಕೆ ವಕೀಲರಿಂದ ಪ್ರತಿವಾದಿ ನಂ.2 ರಿಂದ 6 ರ ಪರವಾಗಿ.***

ಸದರಿ ದಾವೆಯನ್ನು ನಾನು ಸರಿಯಾದ ಪಾಲು ಮಾಡಿಲ್ಲ ಎಂದು ಕಾನೂನು ಬದ್ದ ಪಾಲನ್ನು ಕೇಳಿ ಸಲ್ಲಿಸಿರುತ್ತೇನೆ. ನನ್ನ ತಂದೆ ಚಂದ್ರಗೌಡ ಅಸಲು ದಾವೆ ನಂ.98/2019 ರಲ್ಲಿ ಪ್ರಸ್ತುತ ಪ್ರತಿವಾದರ ಜೊತೆಗೆ ರಾಜಿ ಸಂಧಾನ ಮಾಡಿಕೊಂಡು ರಾಜಿ ಪತ್ರ ಸಲ್ಲಿಸಿರುವ ವಿಷಯ ಸಂಗತಿ ನನಗೆ ಗೊತ್ತಿಲ್ಲ. ಸದರಿ ರಾಜಿ ಸಂಧಾನದ ಕುರಿತು ಇರುವ ದಾಖಲಾತಿಗಳನ್ನು ನಿ.ಪಿ.9 ರಿಂದ 11 ರವರೆಗೆ ಇರುತ್ತವೆ ಎಂದರೆ ನನಗೆ ಅರ್ಥವಾಗಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳ ಕುರಿತು ನನಗೆ ಗೊತ್ತಿದೆ. ಸದರಿ ರಾಜಿ ಸಂಧಾನದ ದಾಖಲಾತಿಗಳನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ನಿಜ. ನನ್ನ ತಂದೆ 14-09-2020 ರಂದು ತೀರಿಹೋದರು. ರಾಜಿ ಡಿಕ್ರಿಯನ್ನು ನನ್ನ ತಂದೆ ಅವರ ಜೀವಿತ ಅವಧಿಯಲ್ಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಅದರ ಕುರಿತು ನನಗೆ ಗೊತ್ತಿಲ್ಲ.

ನಾನು ಪಿಯುಸಿವರೆಗೆ ಬಾಗಲಕೋಟೆಯಲ್ಲಿ ನಂತರ ವಿದ್ಯಾಭ್ಯಾಸವನ್ನು ಧಾರವಾಡದಲ್ಲಿ ಮುಂದುವರೆಸಿದ್ದೇನೆ. ನನಗೆ ಒಬ್ಬ ಅಣ್ಣ, ಒಬ್ಬ ಅಕ್ಕ ಇದ್ದು ಮತ್ತು ನನ್ನ ತಾಯಿ ನಾವು ಮೂರು ಜನ ಮಕ್ಕಳು ಬಾಗಲಕೋಟೆಯಲ್ಲಿ ವಾಸ ಮಾಡುತ್ತಿದ್ದೇವೆ. ನನ್ನ ತಾಯಿ ನನ್ನ ತಂದೆಯ ವಿರುದ್ದ ಜೀವನಾಂಶ ಕೋರಿ ಪ್ರಕರಣ ಹೂಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತಂದೆಯ ಸಂಬಂಧ ಚೆನ್ನಾಗಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆ ಬಂದು ಹೋಗು ಮಾಡುತ್ತಿದ್ದರು, ನಮ್ಮ ಜೊತೆಗೆ ಅವರ ಸಂಬಂಧ ಚೆನ್ನಾಗಿತ್ತು ಎಂದು ಉತ್ತರಿಸುತ್ತಾರೆ.

ನನ್ನ ತಂದೆ ಕೋವಿಡ ಮಹಾಮಾರಿಯಿಂದ ತೀರಿಹೋದರು. ನನ್ನ ತಂದೆ ತೀರಿಹೋದ ನಂತರ ನಾವು ಧಾರವಾಡಕ್ಕೆ ಬಂದಿದ್ದೇವೆ ಎಂದರೆ ನಿಜ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಪ್ರತಿವಾದಿಯರ ಜೊತೆಗೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದರು ಎಂದರೆ ನಿಜ. ಆದ್ದರಿಂದ ಸದರಿಯವರೆಲ್ಲ ಅಸಲು ದಾವೆ 98/2019 ರಲ್ಲಿ ರಾಜಿ ಸಂಧಾನ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.